ಆರ್‌ಬಿಐ/2006-07/173
ಡಿಬಿಒಡಿ. ಸಂ.ಎಲ್‌ಇಜಿ. ಬಿಸಿ.42/09.07.005/2006-07 ನವಂಬರ್ 10, 2006

ಗೆ,
ಎಲ್ಲಾ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು
(ಆರ್ ಆರ್ ಬಿ ಗಳನ್ನು ಹೊರತು ಪಡಿಸಿ)

ಮಾನ್ಯರೆ,

ಗ್ರಾಹಕ ಸೇವೆ – ನಕಲಿ ಡಿಮಾಂಡ್ ಡ್ರಾಫ್ಟ್‌ಗಳ ನೀಡಿಕೆ

ಮಾರ್ಚ್ 9, 2000 ರ ನಮ್ಮ ಸುತ್ತೋಲೆ ಸಂಖ್ಯೆ ಡಿಬಿಒಡಿ. ಸಂ.ಬಿ ಸಿ.147 /09.07.007 / 1999-2000 ಅನ್ನು ದಯವಿಟ್ಟು ಗಮನಿಸಿ. ಅದರಲ್ಲಿ ನಕಲಿ ಡಿಮ್ಯಾಂಡ್ ಡ್ರಾಫ್ಟ್‌ಗಾಗಿ ಗ್ರಾಹಕನು ಕೋರಿಕೆ ಅರ್ಜಿಯನ್ನು ಸಲ್ಲಿಸಿದ ಹದಿನೈದು ದಿನಗಳ ಒಳಗೆ, ಬ್ಯಾಂಕುಗಳು ಆತನಿಗೆ ನಕಲಿ ಡಿಮ್ಯಾಂಡ್ ಡ್ರಾಫ್ಟ್‌ನ್ನು ನೀಡಬೇಕೆಂದು ಸೂಚಿಸಲಾಗಿದೆ. ಈ ನಿಟ್ಟಿನಲ್ಲಿ ಮುಂದುವರಿದು ಈ ನಿಗದಿತ ಸಮಯವನ್ನು ಮೀರಿ ಬ್ಯಾಂಕುಗಳು ವಿಳಂಬ ಮಾಡಿದಲ್ಲೂ ಗ್ರಾಹಕನಿಗೆ ಪರಿಹಾರ ರೂಪದಲ್ಲಿ ನಿಗದಿತ ಠೇವಣಿ ಮೇಲೆ ನೀಡುವ ಬಡ್ಡಿ ದರದಂತೆ ಸಂವಾದಿ ಪರಿಪಕ್ವತೆಗೆ ಅನುಸಾರವಾಗಿ ನೀಡಲು ಬ್ಯಾಂಕುಗಳಿಗೆ ತಿಳುವಳಿಕೆ ನೀಡಲಾಗಿದೆ.

2. 'ಗ್ರಾಹಕ' ಪದವನ್ನು ಮೇಲ್ಕಂಡಂತೆ ಉಪಯೋಗಿಸುವಾಗ, ನಕಲಿ ಡಿಮ್ಯಾಂಡ್ ಡ್ರಾಫ್ಟ್ ಅನ್ನು ಹದಿನೈದು ದಿನಗಳ ಒಳಗಾಗಿ ಖರೀದಿದಾರ / ಫಲಾನುಭವಿ ಜತೆಗೆ ಪತ್ರಧಾರಕನಿಗೂ ನೀಡಬಹುದೇ ಎಂಬ ಸಂದೇಹ ಉಂಟಾಗುತ್ತದೆ.

3. ಈ ವಿಚಾರದಲ್ಲಿ ಖರೀದಿದಾರ/ ಫಲಾನುಭವಿಯಿಂದ ನಕಲಿ ಡಿಮ್ಯಾಂಡ್ ಡ್ರಾಫ್ಟ್ ಗಾಗಿ ಕೋರಿಕೆ ಬಂದಲ್ಲಿ, ನಮ್ಮ ಸುತ್ತೋಲೆ (ಮಾರ್ಚ್ 9, 2000)ಯಲ್ಲಿ ನಿಗದಿ ಪಡಿಸಿದಂತೆ ಹದಿನೈದು ದಿನಗಳ ಒಳಗೆ ನಕಲಿ ಡಿಮ್ಯಾಂಡ್ ಡ್ರಾಫ್ಟ್ ಅನ್ನು ನೀಡಬೇಕೆಂದು ತಿಳಿಸಲಾಗಿದೆಯೇ ವಿನಃ ಇತರೆ ಯಾವುದೇ ಮೂರನೇ ವ್ಯಕ್ತಿಯ ಹಿಂಬರಹಕ್ಕೆ ಅನ್ವಯಿಸಲಾಗದು ಎಂದು ವಿಶದೀಕರಿಸಲಾಗಿದೆ.

4. ದಯವಿಟ್ಟು ಸ್ವೀಕೃತಿಯನ್ನು ದೃಢೀಕರಿಸಿ.

ತಮ್ಮ ವಿಶ್ವಾಸಿ

(ಪ್ರಶಾಂತ್ ಸರಣ್)
ಪ್ರಭಾರ ಮುಖ್ಯ ಪ್ರಧಾನ ವ್ಯವಸ್ಥಾಪಕರು.